ಶ್ರೀ ಜಿ. ಪುಟ್ಟಸ್ವಾಮಿ.—ಸೀನಿಯಾರಿಟಿಯನ್ನು ಓವರ್‌ಲುಕ್ ಮಾಡಿ ಪ್ರಮೋಷನ್ ಕೊಟ್ಟಿರುವುದು ಸಹಕಾರದ ಗಮನಕ್ಕೆ ಬಂದರೆ ಅದನ್ನು ಪರಿಶೀಲಿಸಿ ನ್ಯಾಯ ದೊರಕಿಸಿ ಕೊಡುತ್ತಾರೆಯೇ ?

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಇಂತಹ ಯಾವುದಾದರೂ ನಿರ್ದಿಷ್ಟವಾದ ವಿಚಾರಗಳು ಇದ್ದು ಅವನ್ನು ಸರಕಾರದ ಗಮನಕ್ಕೆ ತಂದರೆ ಅವರ ಮೇಲೆ ತಕ್ಕ ಕ್ರಮ ತೆಗೆದುಕೊಳ್ಳುವಂತಾಗುತ್ತದೆ.

ಶ್ರೀ ಎಂ. ಹೆಚ್. ಜಯಪ್ರಕಾಶನಾರಾಯಣ್.—ಕೇಂದ್ರ ಸರಕಾರದಲ್ಲಿ ಸೀನಿಯಾರಿಟಿ ಕಂ ಮೆರಿಯಟ್ ಎನ್ನುವ ತತ್ವವನ್ನು ಒಪ್ಪಿರುವಂತೆ ಇಲ್ಲೂ ಕೂಡ ಮಾಡಲು ಇದರ ಸಬ್ ಕಮಿಟಿ ಪರಿಶೀಲಿಸುತ್ತದೆಯೇ ?

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಯಾವುದಾದರೂ ಹೊಸ ಕಾರ್ಯಕ್ರಮ ಕೈಗೊಳ್ಳುವ ಬೇಕಾದರೂ ಸರಕಾರ ಇದರ ಬಗ್ಗೆ ತೀರ್ಮಾನ ತೆಗೆದುಕೊಂಡ ಮೇಲೆ ಅವರಂತೆ ತಕ್ಕ ಕಾರ್ಯಕ್ರಮ ತೆಗೆದುಕೊಳ್ಳಲು ಸಾಧ್ಯವಾಗುತ್ತದೆ.

Assistance to Flood Victims in Villages of Sira Taluk

329 Sri T. TAREGOWDA (Kallambella).—

Will the Minister for Revenue be pleased to state.—

(*a*) whether the Government has released the promised amount towards the flood damage losses to the ryots of Amalagondi, Lutta Hanumanapalya, Yelladabagi and other villages in Sira Taluk ;

(*b*) if so, the amount released and the amount to be treated as subsidy and loan per acre of damages incurred ?

Sri N. HUTCHAMASTHY GOWDA (Minister for Revenue).—

(*a*) Yes.

(*b*) Gratuitous relief of Rs. 19.60 lakhs and L.I.Loan of Rs. 8.25 lakhs for Madhugiri, Sira and Koratagere taluks has been released. Rs. 6.50 lakhs as gratuitous relief and Rs. 3.25 lakhs as L. I. Loan has been released to Sira Taluk for providing relief to the sufferers on account of heavy rain.

ಶ್ರೀ ಟಿ. ತಾರೇಗೌಡ.—ಪ್ರವಾಹದಿಂದ ತೊಂದರೆಗೀಡಾದ ಜನಕ್ಕೆ ಕುಡಿಯುವ ನೀರಿನ ಬಾವಿಗಾಗಿ ಸಾವಿರ ರೂಪಾಯಿ, ಜಮೀನು ದುರಸ್ತಿಗಾಗಿ 500 ರೂಪಾಯಿ ಹಾಗೂ ಪಂಪು ಸೆಟ್ಟು ಉಪಯೋಗಿಸಿದರೆ ಇದಕ್ಕೆ 1250 ರೂಪಾಯಿಯಂತ ಧನ ಸಹಾಯ ಕೊಡಬೇಕೆಂದು ಶಿಫಾರಸು ಮಾಡಿರಲಿಲ್ಲವೇ ?

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಸರಕಾರದ ನಿಯಮ ಇರುವುದು ಉಚಿತವಾಗಿ ಸಹಾಯ ಕೊಡತಕ್ಕ ಹಣ 500 ರೂಪಾಯಿಗಳಿಗೆ ಮೀರಿರದಾರದು ಎಂದು.

ಶ್ರೀ ಟಿ. ತಾರೇಗೌಡ—ತಹಶೀಲ್‌ದಾರರಿಗೆ ಕೇವಲ 200 ರೂಪಾಯಿಗಳನ್ನು ಮಂಜೂರು ಮಾಡುವುದಕ್ಕೆ ಅಧಿಕಾರವಿದೆ, 500 ರೂಪಾಯಿಗಳನ್ನು ಮಂಜೂರು ಮಾಡಲು ಜಿಲ್ಲಾಧಿಕಾರಿಯವರಿಗೆ ಮಾತ್ರ ಅಧಿಕಾರವಿದೆ ಎಂದು ಹೇಳಲಾಗುತ್ತಿದೆ. ಇದರಿಂದ ಜಾಗ್ರತೆ ರೈತರಿಗೆ ಹಣ ದೊರೆಯದೆ ರ್ಯಾಪ್ಸ್ ಆಗುವ ಸಂಭವವಿದೆ. ಆದಕಾರಣ ತಹಶೀಲ್‌ದಾರರಿಗೆ 500 ರೂಪಾಯಿಗಳವರೆಗೆ ಮಂಜೂರು ಮಾಡುವ ಅಧಿಕಾರವನ್ನು ಕೊಡುತ್ತೀರಾ ?

ಶ್ರೀ ಎನ್. ಹುಚ್ಚಮಾಸ್ತಿಗೌಡ.—ನಬ್-ಡಿವಿಜನ್ ಆಫೀಸರ್ ಎಷ್ಟು ಹಣ ಮಂಜೂರು ಮಾಡಬಹುದು, ಜಿಲ್ಲಾಧಿಕಾರಿಯವರು ಎಷ್ಟು ಹಣ ಮಂಜೂರು ಮಾಡಬಹುದು ಎಂಬುದಕ್ಕೆ ಒಂದು ನಿಯಮವಿದೆ. ಆ ಒಂದು ನಿಯಮ ಇರುವುದು ಸಕಾರಣವಾಗಿದೆ ಎಂದು ನನ್ನ ಭಾವನೆ. ಮಾರ್ಚ್ ಆಖ್ಯೆರಿನೊಳಗೆ ಹಣವನ್ನು ವಿತರಣೆ ಮಾಡುವ ಹಾಗೆ ನಾನು ಏರ್ಪಾಡು ಮಾಡುತ್ತೇನೆ.

ಶ್ರೀ ಟಿ. ತಾರೇಗೌಡ.—ಈಗ ಅಲ್ಲಿಯ ತಹಶೀಲ್ದಾರರಿಗೆ ವಾಹನದ ತೊಂದರೆ ಇರುವುದರಿಂದ ವಾಹನವನ್ನು ಒದಗಿಸುವುದಕ್ಕೆ ಏರ್ಪಾಡು ಮಾಡುತ್ತೀರಾ ?

ಶ್ರೀ ಎನ್. ಹುಚ್ಚಮಾಸ್ತಿಗೌಡ.— ಆ ಒಂದು ಕೆಲಸಕ್ಕಾಗಿ ವಾಹನವನ್ನು ಒದಗಿಸುವುದು ಕಷ್ಟ. ಬೇರೆ ಇಲಾಖೆಯ ವಾಹನವನ್ನು ಪಡೆದುಕೊಂಡು ಕೆಲಸ ಮಾಡಬೇಕೆಂದು ಗೊತ್ತುಮಾಡುತ್ತೇನೆ. ಮತ್ತು ಮಾರ್ಚ್ ತಿಂಗಳೊಳಗೆ ಆ ಕೆಲಸವಾಗುವಂತೆ ನೋಡಿಕೊಳ್ಳಲಾಗುತ್ತದೆ.

Veterinary Hospital at Harnahally

7. Sri S. M. SHEERANALY CHANDRASEKHAR (Hosanagar).—

Will the Minister of State for Animal Husbandry be pleased to state:—

(*a*) the reasons for delay in the establishment of a Veterinary Hospital at Harnahally of Shimoga taluk even after repeated requests made by the public ;

(*b*) whether Government is aware that the abovesaid place is a thickly populated area with big cattle strength and that it is in urgent need of a Veterinary Hospital ?

Sri N. CHIKE GOWDA (Minister of State for Animal Husbandry).—

(*a*) The proposal for opening of a Rural Veterinary Dispensary at Harnahalli is not considered since there is a nearest Rural Veterinary Dispensary at Ayanoor at a distance of 4 miles for providing Veterinary Aid to the cattle of the said village.

(*b*) This does not arise in view of the reply at (*a*) above.

ಶ್ರೀ ಎಸ್. ಎಂ. ಶೀರನಾಳಿ ಚಂದ್ರಶೇಖರ್.— ಪಶುವೈದ್ಯಶಾಲೆಯನ್ನು ಕೊಡಲು ಆ ಪ್ರದೇಶದ ಜಾನುವಾರುಗಳ ಸಂಖ್ಯೆಯನ್ನು ಗಮನಕ್ಕೆ ತೆಗೆದುಕೊಳ್ಳುತ್ತೀರೋ ಅಥವಾ ದೂರದ ಅಂತರದ ಮೇಲೆ ಪಶುವೈದ್ಯ ಶಾಲೆಯನ್ನು ಮಂಜೂರು ಮಾಡತ್ತೀರೋ ?

† ಶ್ರೀ ಎನ್. ಚಿಕ್ಕೇಗೌಡ.—ಸರ್ಕಾರ ಪಶುವೈದ್ಯ ಶಾಲೆಗಳನ್ನು ಕೊಡುವ ಕಾಲದಲ್ಲಿ ಮೂರು ಮುಖ್ಯವಾದ ಅಂಶಗಳನ್ನು ಗಮನಕ್ಕೆ ತೆಗೆದುಕೊಂಡು ತೀರ್ಮಾನ ಕೈಕೊಳ್ಳುತ್ತದೆ. ಮೊದಲದೆಯದಾಗಿ ಒಂದು ಸ್ಥಳದಲ್ಲಿ ಕನಿಷ್ಠ 10 ಸಾವಿರ ಜಾನುವಾರುಗಳ ಸಂಖ್ಯೆ ಇರಬೇಕು. ಅಂದರೆ ಆ ಪ್ರದೇಶ 6 ಮೈಲಿಯ ಸುತ್ತಳತೆಯ ಪ್ರದೇಶವಾಗಿರಬೇಕು. ಮತ್ತು ಆ 6 ಮೈಲಿ ಸುತ್ತಳತೆಯ ಪ್ರದೇಶದಲ್ಲಿ ಯಾವ ಒಂದು ಆಸ್ಪತ್ರೆಯೂ ಇಲ್ಲದೇ ಇರಬೇಕು. ಇದನ್ನು ಗಮನದಲ್ಲಿ ಇಟ್ಟುಕೊಳ್ಳುವುದೇ ಅಲ್ಲದೆ, ನಮ್ಮ ರಾಜ್ಯದಲ್ಲಿ ತಾಲ್ಲೂಕ್‌ವಾರು ಎಷ್ಟು ಕಡೆಗಳಲ್ಲಿ ಆಸ್ಪತ್ರೆಗಳಿವೆ, ಎಲ್ಲೆಲ್ಲಿ ಇವೆ ಎಂಬುದನ್ನೂ ಸಹ ಗಮನದಲ್ಲಿಟ್ಟುಕೊಂಡು ಹೊಸದಾಗಿ ಮಂಜೂರು ಮಾಡುವುದನ್ನು ಸರ್ಕಾರ ಪರಿಶೀಲನೆ ಮಾಡುತ್ತದೆ.

ಶ್ರೀ ಎಸ್. ಎಂ. ಶೀರನಾಳಿ ಚಂದ್ರಶೇಖರ್.—ಜಾನುವಾರುಗಳ ಸಂಖ್ಯೆ 10 ಸಾವಿರ ಇದ್ದರೆ ಕೊಡುತ್ತೇವೆಂದು ಹೇಳಿದಿರಿ. ಆದರೆ ನನ್ನ ಎರಡನೆಯ ಪ್ರಶ್ನೆಗೆ ಉತ್ತರವಾಗಿ ಈ ಪ್ರಶ್ನೆ ಉದ್ಭವಿಸುವುದಿಲ್ಲ ಎಂದು ಹೇಳಿದ್ದೀರಿ. ಇದು ಒಂದಕ್ಕೊಂದು ಕಾಂಟ್ರಡಿಕ್ಟರಿಯಾಗುವುದಿಲ್ಲವೇ ?